# ಚಂದ್ರಶೇಖರ ಕಂಬಾರರ ಕಾವ್ಯ: ಪರಂಪರೆಯೊಳಗಿನ ಸತ್ವ ಶೋಧ

ಡಾ.ಶುಭಾ ಮರವಂತೆ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು ಶಿವಮೊಗ್ಗ.

ಚಂದ್ರಶೇಖರ ಕಂಬಾರರು ಕನ್ನಡದ ವಿಶಿಷ್ಟ ಕವಿ. ಅವರ ಕಾವ್ಯ ಲಹರಿಯ ಬಿಳಲುಗಳು ನಮ್ಮ ಜನಪದ ಸಂಸ್ಕೃತಿ, ಪರಂಪರೆಯ ಬೇರುಗಳಲ್ಲಿ ಹೂತಿದೆ. ಕನ್ನಡ ನವೋದಯ ಸಾಹಿತ್ಯದಿಂದ ಆಕರ್ಷಿತವಾದ ಕಂಬಾರರಿಗೆ ಕುವೆಂಪು ಅವರ ಕಾವ್ಯವೆಂದರೆ ಎಲ್ಲಿಲ್ಲದ ಪ್ರೀತಿ. ಕುವೆಂಪು ಅವರ ಅನುಕರಣೆ ಎಂಬಂತೆ ಅವರ ಮೊದಲ ಕವನಸಂಕಲನ 'ಮುಗುಳು' ೧೯೫೮ರಲ್ಲಿ ಪ್ರಕಟವಾಯಿತು. ಅವರಾಗ ಬಿ.ಎ. ಓದುತ್ತಿರುವ ವಿದ್ಯಾರ್ಥಿ. ನವೋದಯ ಕಾವ್ಯದ ಮುಗ್ಧತೆ, ದೈವೀ ಪ್ರೇಮ, ಪ್ರಕೃತಿ, ಮಾನವೀಯತೆ, ಅನುಕಂಪವೇ ಮೊದಲಾದ ಭಾವ ವೈವಿಧ್ಯಗಳು ಮುಗುಳು ಸಂಕಲನದಲ್ಲಿವೆ. 'ಕವನಭಾಮೆ', 'ಹೊಸಹಾಡು', 'ಆಹ್ವಾನ', 'ಅಪರಾವತಾರ', 'ಮಧುರಮಿಲನ', 'ಆ ಭಿಕ್ಷುಕಿ', 'ಗಾಳಿಸೇದಿದಿ ಬೀಡಿ', 'ಅಣ್ಣ ಕೀಟ್ಸನ ಸಾವನು ನೆನೆದು' ಇತ್ಯಾದಿ ಕವಿತೆಗಳು ಸಂಕಲನದಲ್ಲಿವೆ. ಅಡಿಗರ 'ಕಟ್ಟುವೆವು ನಾವು' ಕವಿತೆಯ ಆಶಯವನ್ನು ಅವರ 'ಆಹ್ವಾನ' ಕವಿತೆ ಹೀಗೆ ಧ್ವನಿಸುತ್ತದೆ :

ಧಮನಿಯಲಿ ಬಿಸಿನೆತ್ತರುಕ್ಕುತಿಹ ಹೇ ಯುವಕ
ಹೊಸದೊಂದು ಬ್ರಹ್ಮಾಂಡ ಕಟ್ಟೋಣ ಬಾ
ಹಳೆಹಸಿಯ ಕೆಲಸರಿಂದ ಕಸಗೊಂಡು ಕಿತ್ತೇಳು
ಹೊಸ ಯುಗದ ಹಣೆ ಬರಹ ಬರೆಯೋಣ ಬಾ
ದಿನದ ಮೂಡಣ ರವಿಯ ಕಿತ್ತೆಸೆದು ನಮ್ಮ ಹೊಸ
ರವಿಯ ಪಡುವಣದಿ ಮೂಡಿಸಲು ಬೇಕು.

ಈ ಭೂಮಿಯನ್ನು ನಾಶಗೊಳಿಸುವ ನವನಾಗರೀಕ ವಿಜ್ಞಾನದ ಆವಿಷ್ಕಾರಗಳನ್ನು ಮುಗ್ಧವಾಗಿಯೇ ಪ್ರಶ್ನಿಸುವ ಕವಿ

ಸಾಯುತಿಹುದು ಮುಗ್ಧಧರಾ ಉಳಿಸುವವರು ಇಲ್ಲವೆ?
ಅರ್ಥ ಚಮಚೆ ಕರುಣೆ ಕೂಡ ನಿಮ್ಮ ಬಳಿಯಲಿಲ್ಲವೆ?

ಎಂದು ಕೇಳುತ್ತಾರೆ. ಬಸವರಾಜ ಕಟ್ಟೀಮನಿಯವರು ಈ ತರುಣ ಕವಿಯ ಪ್ರಥಮ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಇನ್ನೂ ಉತ್ತಮ ಕಾವ್ಯ ಇವರಿಂದ ಬರುವುದರಲ್ಲಿ ಸಂಶಯವಿಲ್ಲ ವೆಂದು ಬರೆದಿದ್ದಾರೆ. ಅವರ ಹಾರೈಕೆ ಸುಳ್ಳಾಗಲಿಲ್ಲ. ಅವರ ಮುಂದಿನ ಸಂಕಲನ 'ಹೇಳತೇನ ಕೇಳ' ಸ್ವಂತಿಕೆಯ ಛಾಪು ಒತ್ತಿದ ನಿಜವಾದ ಕಂಬಾರರನ್ನು ಪರಿಚಯಿಸಿತು. 'ಹೇಳತೇನ ಕೇಳ' ೧೯೬೪ರಲ್ಲಿ ಅವರು ಎಂ.ಎ.ವಿದ್ಯಾಭ್ಯಾಸ ಮುಗಿಸಿದ್ದಾಗ ಪ್ರಕಟಿಸಿದ ಕವಿತಾ ಸಂಕಲನ. ಇದೊಂದು ಆಧುನಿಕ ಲಾವಣಿ ರೂಪದ ಕಥನ ಕವನ. ನವ್ಯ ಕಾವ್ಯದ ಉಚ್ಛ್ರಾಯದ ಕಾಲಘಟ್ಟದಲ್ಲಿ ಈ ಕೃತಿ ಹೊರ ಬಂದರೂ ನವ್ಯಕವಿಣಿಗಿಂತ ಕಂಬಾರರು ಭಿನ್ನವೆನ್ನುವುದನ್ನು ಇದು ತೋರಿಸಿತು. ಜಾನಪದ ಹಾಗೂ ಪುರಾಣಪ್ರಜ್ಞೆಯೂ ಸೇರಿದ ಹೊಸ ಕಾವ್ಯ ದೃಷ್ಟಿಯ ಪ್ರಯೋಗ ಈ 'ಹೇಳತೇನ ಕೇಳ'. ಇದು 'ಡಪ್ಪಿನ ಪದಗಳ ಆಕೃತಿಯನ್ನು ಹೋಲುತ್ತದೆ. ಒಂದು ಕಾಲದಲ್ಲಿ ಶಾಂತಿ ನೆಮ್ಮದಿಯಿಂದ ಕೂಡಿದ ಶಿವಾಪುರವೆಂಬ ಗ್ರಾಮದಲ್ಲಿ ಆದ ಸಾಮಾಜಿಕ ಪರಿವರ್ತನೆಯ ಮಾದರಿಯೊಂದನ್ನು ದಾಖಲಿಸುತ್ತದೆ. ಈ ಲಾವಣಿಯ ಕಥ ಸನ್ನಿವೇಶ ಹೀಗಿದೆ : ಶಿವಾಪುರಕ್ಕೆ ಭರತೇಶ ಎಂಬುವನೊಬ್ಬಗೌಡ ಅವನೊಂದು ದಿನ ಏಳು ಪಟ್ಟೆಯ ಹುಲಿಯ ಬೇಟೆಗಾಗಿ ಕಾಡಿಗೆ ಹೋರಡುತ್ತಾನೆ. ಅದೊಂದು ರಾಕ್ಷಸ ಮಾಯಾವಿ ಹುಲಿ ಅದು ಗೌಡನನ್ನು ಕೊಂದು ಊರ ಹೊರಗಿನ ಬಾವಿಗೆ ಹಾಕಿ ಗೌಡನ ವೇಷಧರಿಸಿ ಊರಿಗೆ ಬರುತ್ತದೆ. ಗೌಡನ ಹೆಂಡ್ತಿ ಲಕ್ಷ್ಮೀ ದೇವಿಯನ್ನು ಗರ್ಭಿಣಿಯಾಗಿ ಮಾಡುತ್ತದೆ. ಊರ ಗೌಡನ ಸ್ಥಾನಮಾನವನ್ನು ಆಕ್ರಮಿಸಿಕೊಳ್ಳುತ್ತದೆ. ಗೌಡ್ತಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಒಟ್ಟು ಈ ಲಾವಣಿಯಲ್ಲಿ ೨೧ ನುಡಿಗಳಿವೆ.

'ತರಕಾರಿನವರು (೧೯೭೧) ಕಾವ್ಯ ಸಂಕಲನ ನವ್ಯದ ಪ್ರಭಾವವನ್ನು ನೆನಪಿಸುವ ಒಂದು ಕೃತಿ ಆದರೂ ಕಂಬಾರರು ನವ್ಯದ ಸಿನಿಕತನ, ಅಸಹನೆ, ಅನಾಥಪ್ರಜ್ಞೆ, ವ್ಯಂಗ್ಯವೇ ಮೊದಲಾದ ಗುಣ ಇನ್ನೂ ಮೀರಿ ಸ್ವಂತಿಕೆಯನ್ನು ಈ ಸಂಕಲನದ ಮೂಲಕವೂ ಸಾಬೀತು ಪಡಿಸಿಕೊಂಡರು. 'ನಮ್ಮಜ್ಜ' 'ಗಂಗಾಮಾಮಿ' , 'ಮಾವೋತ್ಸೆ ತುಂಗನಿಗೆ' ಮೊದಲಾದ ಪ್ರಸಿದ್ಧ ಕವನಗಳು ಈ ಸಂಕಲನದಲ್ಲಿವೆ. ಪರಂಪರೆಯಿಂದ ಬಂದ ಮೌಢ್ಯ, ಅಂಧಾನುಕರಣೆಯನ್ನು ಪ್ರಶ್ನಿಸುವ ಕೆಚ್ಚು ಅವರಲ್ಲಿ ಸ್ಫುಟಗೊಂಡಿರುವ ದ್ಯೋತಕವಾಗಿದೆ ಈ ಕೃತಿ. ಇದೇ ರೀತಿ 'ಸಾವಿರದ ನೆರಳು', ಬೆಳ್ಳಿ ಮೀನು (೧೯೮೯) ಅಕ್ಕಕ್ಕು ಹಾಡುಗಳೆ (೧೯೯೩) ಚಕೋರಿ (ಮಹಾಕಾವ್ಯ) (೧೯೯೬) ಎಲ್ಲದೆ ಶಿವಾಪುರ ಕಂಬಾರರ ಇನ್ನಿತರ ಕಾವ್ಯ ಸಂಕಲನಗಳಾಗಿವೆ. ಕಂಬಾರರ ಪ್ರಸಿದ್ಧ ಕವನಗಳಾದ 'ಗಂಗಾಮಾಯಿ' ಹಾಗೂ 'ಮಾವುತ್ಸೆತುಂಗನಿಗೆ' ಹಾಗೂ 'ನಮ್ಮಜ್ಜ' ಕವಿತೆಗಳು 'ತರಕಾರಿನವರು (೧೯೭೦)' ಸಂಕಲನದಲ್ಲಿವೆ.

ಕಂಬಾರರ ನವ್ಯದ ಜಾಡನ್ನು ಪರಿಚಯಿಸುವ ಕವಿತಗಳವು. ಪರಂಪರೆಯ ದೌರ್ಬಲ್ಯಗಳನ್ನು ಅದರ ನಿಸತ್ವವನ್ನೂ ವಿವಿಧ ಸಂಕೇತ, ರೂಪಕಗಳ ಮೂಲಕ ನಮ್ಮೆದುರು ಈ ಕವಿತೆಗಳು ಕಟ್ಟಿಕೊಡುತ್ತವೆ. ಅತ್ತ ಅದನ್ನು ಹಿಡಿದುಕೊಳ್ಳಲೂ ಆಗದ ಇತ್ತ ಬಿಡಲೂ ಆಗದ ಸಂಧಿಗ್ಧತೆ ಕವಿಯನ್ನು ಕಾಡಿದೆ. 'ನಮ್ಮಜ್ಜ' ಕವಿತೆಯ ಅಜ್ಜ ಪರಂಪರೆಯ ದ್ಯೋತಕ. ಅವನಿಗೆ ಅಂತಃಸತ್ವವನ್ನು ಕಳೆದುಕೊಂಡು ನಿಸ್ತೇಜನಾಗಿದ್ದಾನೆ. ಆದರೂ ಅವನೊಂದಿಗಿನ ಕರುಳ ಬಳ್ಳಿಯ ಸಂಬಂಧ ಕವಿಯನ್ನು ಗಾಢವಾಗಿ ಬಿಗಿದುಕೊಂಡಿದೆ. ಕತ್ತರಿಸಿಕೊಳ್ಳಬೇಕೆಂದರೂ ಕತ್ತರಿಸಿಕೊಳ್ಳುವುದು ಅಸಾಧ್ಯವಾಗಿದೆ.

ಹಸಿರು ಕೈ ಕೊಟ್ಟ ವಟವೃಕ್ಷ ನಮ್ಮಜ್ಜ
ಮುಂದೆ ಅಂಗಳ ತುಂಬ, ಹಿಂದೆ ಹಿತ್ತಲ ತುಂಬ
ಮೈ ಕೈ ನೆರಳ ಚೆಲ್ಲಿ ಕೂರುತ್ತಾನೆ
ಬಲಿತ ಗಾಯದ, ರೆಕ್ಕೆ ಬಲಿಯಲಾರದ ಹಕ್ಕಿ
ಅಲ್ಲಿ ಟೊಂಗೆಯ ಮೇಲೆ ಇಲ್ಲಿ ಟಿಸಿಲಿನ ಮೇಲೆ
ಹಾ ನರಳಿ ಕಿರುಚುತ್ತವೆ. ( "ನಮ್ಮಜ್ಜ" )

ಸಂಸ್ಕೃತಿ ಪರಂಪರೆಗಳು ಚಲನ ಶೀಲವಾದಾಗ ಅವು ಹರಿಯುವ ನೀರಾಗುತ್ತವೆ ; ಆದರೆ ಅವು ನಿಂತಲ್ಲೇ ನಿಂತರೆ ಕೊಳಕು ಕೆರೆಯಾಗುತ್ತವೆ. ಕಂಬಾರರ 'ಗಂಗಾಮಯಿ' ಪರಂಪರೆಯೊಂದು ನಿಂತಲ್ಲೇ ಇದ್ದು ಬಿಟ್ಟರೆ ಅದೆಷ್ಟು ಕೊಳಕಾಗುತ್ತದೆ ಎನ್ನುವುದನ್ನು ಬಿಂಬಿಸುವ ಕವಿತೆಯಾಗಿದೆ.

ಮೂಡಣದ ಮುದಿ ಕುರುವೊಡೆದು ನೆತ್ತರು ಕೀವು ಸೋರಿತೋ, –
ಸುರುವಾಯ್ತಿಲ್ಲ ಚಲನೆ : ತೆರೆಯ ಮಿಡಿನಾಗರಗಳೆದು
ಮುರಿದಾಡಿ, ಮಣಿದು ಹೊಡಮರಳಿ, ತಳಕು ಬಿದ್ದಾಡಿ ಮೂಡಿದ್ದ
ಬಾವಲಿ ಹಿಂಡು ಗೆರೆಗೆರೆಯಾಗಿ ಹಂಚಿ ಹಲವಾರಾಗಿ, ಸುಕ್ಕುಗಟ್ಟಿ
ತೆಲುವ ಚಿಳಮಿಳ ಮೀನ ಹೆಕ್ಕಿ ತಿನ್ನುತ್ತ ತಿರುಗುವವು
ಒಂಟಿಕಾಲಿನ ನೂರೆಂಟು ಬಕ. (ಗಂಗಾಮಾಯಿ)

'ತಕರಾರಿನವರು ಸಂಕಲನದಲ್ಲಿರುವ 'ಮಾವೊತ್ಸೆ ತುಂಗನಿಗೆ' ಕವನವೂ ವಿಶಿಷ್ಟವಾದುದು ಚೀನಾ ಭಾರತದ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ಅಸಹಾಯಕ ಭಾರತವನ್ನು ಒಬ್ಬ ಮುಗ್ಧ ಗರತಿಗೆ ಹೋಲಿಸಿ ಹೋಲಿಸಿ ಬರೆದಿದ್ದಾರೆ. ನವ್ಯದ ಉತ್ತುಂಗ ಸ್ಥಿತಿಯಲ್ಲಿ ಕಂಬಾರರು 'ಸಾವಿರದ ನೆರಳು' ಕವನ ಸಂಕಲನವನ್ನು ಪ್ರಕಟಿಸಿದರು (೧೯೭೯) 'ನೆರಳಿನ ಜೋಡಿ' ; 'ಕಲೆಗಾರಣ್ಣನ ಲಾವಣಿ', 'ಗುಡುಗುಡು ಗುಮ್ಮ', 'ಮರತೇನಂದರ ಮರೆಯಲಿ ಹೆಂಗಾ' ಆ ಮಿಕ, 'ಸಾವಿರದ ಶರಣವ್ವ ಕರಿಮಾಯಿ ತಾಯೆ', 'ಕಾಡುಕುದುರೆ', 'ಕುದುರಿಸಿದ್ದ', 'ಬ್ಯಾಟಿ ಬ್ಯಾಟಿಯನಾಡಿದಾ' ಮೊದಲಾದ ಕವನಗಳು ಈ ಸಂಕಲನದಲ್ಲಿವೆ. ಅವರ 'ಗುಡುಗುಡು ಗುಮ್ಮ' ಮಗುವನ್ನು ಮಲಗಿಸುವ ಶೈಲಿಯಲ್ಲಿ ಆಧುನಿಕತೆ, ನಗರೀಕರಣ, ಜಾಗತೀಕರಣದ ಪ್ರವೇಶವನ್ನು ಸೂಕ್ಷ್ಮವಾಗಿ ವಿವರಿಸುತ್ತ ಹೋಗುತ್ತದೆ. 'ರೋಡ್‌ರೋಲರ್' ಪ್ರತಿಮೆಯ ಮೂಲಕ ವ್ಯವಸ್ಥೆಗೆ ಕನ್ನಡಿ ಹಿಡಿಯುವ ಕವನ ಮನೋಜ್ಞವಾಗಿದೆ. ಈ ಸಂಕಲನದ ಇನ್ನೊಂದು ಪ್ರಸಿದ್ಧ ಕವನ 'ಮರತೇನಂದರ ಮರೆಯಲಿ ಹೆಂಗಾ', ಮಾವೋತ್ಸೆತುಂಗಾನನ್ನು ನೆನೆದು ಬರೆದ ಪ್ರಸಿದ್ಧ ಕವನ.

'ಕಾಡು ಕುದುರೆ' ಕಂಬಾರರ ಜನಪ್ರಿಯ ಕವಿತೆಗಳಲ್ಲಿ ಒಂದು. ಶಿವಮೊಗ್ಗ ಸುಬ್ಬಣ್ಣನವರ ಕಂಠಸಿರಿಯಲ್ಲಿ ಮೂಡಿ ಬಂದ ಈ ಕವಿತೆ ಇಂದಿಗೂ ಜನಮಾನಸದಲ್ಲಿ ಕಂಬಾರರ ಸಾಹಿತ್ಯದ ಗುಂಗು ತುಂಬಿಸಿದೆ. ಇದರ ಲಯ ಚಿತ್ರ ಅದ್ಭುತ. ಕುದುರೆಯ ವೇಗದ ಗತಿ, ಭಾಷೆಯಲ್ಲಿ ಮೂಡಿಸಿದ ಭಾವಾಭಿನಯ ಪಂಜೆಯವರ 'ತೆಂಕಣಗಾಳಿಯಾಟ' ಕವಿತೆಯನ್ನು ನೆನಪಿಸುತ್ತದೆ. 'ಕಾಡುಕುದುರೆ' ಚಲನಚಿತ್ರಕ್ಕಾಗಿ ಸ್ವಯಂ ಕಂಬಾರದ ಸಂಗೀತ ನಿರ್ದೇಶನದಲ್ಲಿ ಶಿವಮೊಗ್ಗ ಸುಬ್ಬಣ್ಣ, ಕಲ್ಪನಾಶಿರೂರ್ ಈ ಹಾಡನ್ನು ಹಾಡಿದ್ದಾರೆ. ಸುಬ್ಬಣ್ಣನವರಿಗೆ ರಾಷ್ಟ್ರಪ್ರಶಸ್ತಿ ತಂದು ಕೊಟ್ಟಿತು. ಕನ್ನಡದಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಚಿತ್ರಗೀತೆ ಎಂಬ ಹೆಗ್ಗಳಿಗೆ ಈ ಕವಿತೆಗಿದೆ. ಇಂಥದೊಂದು ಹಾಡು ಬರೆಯಲು ಸ್ಫೂರ್ತಿ ಏನೆಂದು ಕಂಬಾರರನ್ನು ಕೇಳಿದರೆ ಅದಕ್ಕವರು ಹೀಗೆಂದರಂತೆ. " ಇಂಗ್ಲೀಷಿನಲ್ಲಿ ಕುದುರೆಯನನೇ ಮುಖ್ಯ ಪಾತ್ರವಾಗಿಟ್ಟುಕೊಂಡು ಬರೆದ ಒಂದು ನಾಟಕ ಓದಿದೆ. ಅದು ನನಗೆ ಬಹಳ ಇಷ್ಟವಾಯಿತು. ಮುಂದೆ ಕುದುರೆಯ ಪಾತ್ರ ಒಂದು ರೂಪಕವಾಗಿ, ಸಂಕೇತವಾಗಿ ಕಾಡತೊಡಗಿತು. ಈ ಸಂದರ್ಭದಲ್ಲೇ 'ಕುದುರಿಸಿದ್ಧ' ಕವಿತೆ ಬರೆದೆ. ಪ್ಯೂಡಲ್ ವ್ಯವಸ್ಥೆಯನ್ನು ವಿರೋಧಿಸುವ ನೆಲೆಯಲ್ಲಿ ಹುಟ್ಟಿಕೊಂಡ ಕವಿತೆ. ಸಿದ್ಧನೊಬ್ಬ ಉಡಾಳ. ಪಡ್ಡೆ ಹುಡುಗ, ಅವನಿಗೆ ರಾಜಕುಮಾರಿಯನ್ನು ವರಿಸುವ ಆಸೆ. ರಾಜಕುಮಾರಿ ಅವನೊಂದಿಗೆ ಪ್ರೀತಿಯ ನಾಟಕವಾಡಿ ದೂರ ಸರಿಸುತ್ತಾಳೆ. ಪ್ರೇಮ ವಂಚಿತನಾದ ಸಿದ್ಧ ಕಾಡಿಗೆ ಹೋಗಿ ಕುದುರೆಯೊಂದನ್ನು ಪಳಗಿಸಿ ತರುವುದು ಇದರ ಕಥಾವಸ್ತು. ಪ್ರೇಮ ತುಂಬಿದ ಹುಚ್ಚು ಮನಸು ಕಡಿವಾಣವಿಲ್ಲದ ಕುದುರೆ. ಇದನ್ನೆಲ್ಲಾ ಸಂಭಾಷಣೆ ರೂಪದಲ್ಲಿ ಬರೆಯುವುದಕ್ಕಿಂತ ಹಾಡಿನ ಮೂಲಕ ಹೇಳಿದರೆ ಚೆಂದ ಅನ್ನಿಸಿತು. ಅದಕ್ಕಾಗಿ ಬರೆದೆ". 'ಕಾಡು ಕುದುರೆ' ಚಿತ್ರೀಕರಣದ ಸಂದರ್ಭದಲ್ಲಿ ಅಲ್ಲಿ ಬಳಸಲಾದ ಕುದುರೆ ಬೆಂಗಳೂರಿನ ಮಾರ್ಕೆಟಿನಲ್ಲಿದ್ದ ಒಬ್ಬ ಜಟಕಾ ಸಾಬರದ್ದು. ಅವನು ಶೂಟಿಂಗ್ ಮುಗಿದ ಮೇಲೆ ಆ ಕುದುರೆಯೊಂದಿಗೆ ಮಾತಾಡುತ್ತಿದ್ದನಂತೆ 'ಆ ಸೀನ್‌ನಾಗಿ ನೀನು

ಇನ್ನೂ ಚೆನ್ನಾಗಿ ಮಾಡ್ಬೇಕಿತ್ತುಕಣೋ. ಇನ್ನೂ ಚೆನ್ನಾಗಿ ಪಿಕ್ಚರ್‌ನಾಗೆ ಮಿಂಚಬೇಕು ನೀನು' ಎನ್ನುತ್ತಾ ತಾನು ಕುಡಿಯುತ್ತಿದ್ದ ರಮ್ಮನ್ನು ಅದಕ್ಕೂ ಸ್ವಲ್ಪ ಕುಡಿಸುತ್ತಿದ್ದನಂತೆ. 'ಇನ್ಮೇಲೆಥಂದಾಗಿ ಮಾಡಬೇಕು ಕಣೋ' ಎಂದು ಹೇಳಿದಾಗ ಆ ಕುದುರೆ 'ಸರಿ ಸರಿ' ಎಂದು ತಲೆಯಾಡಿಸುತ್ತಿತ್ತಂತೆ. ಈ ಸಂಗತಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ಕಂಬಾರರು, ' ಈ ಹಾಡು ಬರೀದಿದ್ರೆ ಕುದುರೆ 'ಗುಂಡು' ಹಾಕೋದ್ನ ನೋಡಲು ಸಾಧ್ಯವಿರಲಿಲ್ಲ' ಎಂದು ನಗುತ್ತಿದ್ದರಂತೆ. ಒಟ್ಟಿನಲ್ಲಿ ಕಂಬಾರರ 'ಕಾಡುಕುದುರೆ' ಸೃಷ್ಟಿ ಅಪೂರ್ವ ನಾಡು ಕುದುರೆ ನಮಗೆಲ್ಲಾ ಗೊತ್ತು. ಆದರೆ ಈ 'ಕಾಡು ಕುದುರೆ' ಯಾವುದು ಎನ್ನುವ ಪ್ರಶ್ನೆ ಹಲವರನ್ನು ಕಾಡಿದೆ. ಅದು ಕಂಬಾರರು ಕಲ್ಪನಾ ಸೃಷ್ಟಿ ಎಂಬುದರಲ್ಲಿ ಎರಡು ಮಾಡಿಲ್ಲ.

ಕಾಡು ಕುದುರೆ ಓಡಿ ಬಂದಿತ್ತ ॥
ಊರಿನಾಚೆ ದೂರ ದಾರಿ
ಸುರುವಾಗೊ ಜಾಗದಲ್ಲಿ ।
ಮೂಡ ಬೆಟ್ಟ ಸೂರ್ಯ ಹುಟ್ಟಿ
ಹಸುರಿನ ಗುಟ್ಟ ಒಡೆವಲ್ಲಿ
ಮುಗಿವೇ ಇಲ್ಲದ ।
ಮುಗಿಲಿನಿಂದ ।
ಜಾರಿ ಬಿದ್ದ ಉಲ್ಕಿ ಹಾಂಗ
ಕಾಡಿನಿಂದ ಚಂಗನೆ ನೆಗೆದಿತ್ತ ॥ಕಾಡು॥ (ಕಾಡುಕುದುರೆ)

'ಕುದುರಿಸಿದ್ಧ' ಕಥನ ಕವನವೂ ಈ ಸಂಕಲನದ ಇನ್ನೊಂದು ಮಹತ್ವದ ಕವನ. ಹಾಗೆಯೇ 'ರಾಮಾಯಣವೂ ಗೋದೂ ತಾಯಿಯೂ' ಕೂಡ. 'ಬೆಳ್ಳಿ ಮೀನು' (೧೯೮೯) ಕಂಬಾರರ ನಾಲ್ಕನೇ ಕವನ ಸಂಕಲನದ 'ನಿನ್ನ ಕಣ್ಣು', 'ಮಂದಾರ ಮರ', 'ರಂಗಭೂಮಿ ಮತ್ತು ನಾನು', 'ನಶ್ಯ', 'ನವಿಲೇ ನವಿಲೇ' ಮೊದಲಾದ ಕವನಗಳು ಇಲ್ಲವೆ. ನವಿಲೇ ನವಿಲೇ ಕವಿತೆ ಬರಗಾಲಕ್ಕೆ ಗುರಿಯಾದ ಶಿವಾಪುರಕ್ಕೆ ಮಳೆ ತಂದ ನವಿಲಿನ ಸುತ್ತ ಕಥೆ ಹೆಣೆಯಲಾಗಿದೆ. 'ಯಾರವ್ವ ಈ ಚೆಲುವ' ಜನಪದ ತ್ರಿಪದಿಗಳಲ್ಲಿ ವರ್ಣಿತವಾದ ಮಗುವಿನ ಮುಗ್ಧ ಸೌಂದರ್ಯವನ್ನು ನೆನಪಿಸುತ್ತದೆ. ತಾಯಿಗೆ ತನ್ನ ಮಗ ಸೂರ್ಯನ ಥರ ಹೊಳೆಯುವ ಚೆಲುವನಾಗಿ ಕಾಣಿಸಿಕೊಳ್ಳುತ್ತಾನೆ.

ಯಾರವ್ವ ಈ ಚೆಲುವ
ತಂತನೆ ರಂಜಿಸುವ
ಸೂರ್ಯನ ಥರ ಹೊಳೆಯುವ ॥
ಅಂಬೆಗಾಲಿಡುವಂಥ ಆನೆಯ ಮರಿಯೇನೆ
ಜೊಲ್ಲು ಸುರಿದಲ್ಲೆಲ್ಲ ಮಲ್ಲಿಗೆ ಹೂವೇನೆ
ನಕ್ಕರೀತನ ಮುಂದೆ ಚಂದ್ರ ಕಳೆಗುಂದುವನೆ
ಬಾರೋ ಭಾಗ್ಯದ ಒಡೆಯನೇ ।

ಹೃದ್ಯವಾದ ಶಿಶುವರ್ಣನಾ ಗೀತೆಯಿದು. 'ಹಾರಿ ಬಂದನೆ ಎವ್ವಾ ಏರಿ ಬಂದನೇ', 'ಶಾಂತನಿಲ್ಲದ ಮೇಲೆ', 'ಏನ ಹೇಳಲವ್ವ ಭಾರತಿ' ಮೊದಲಾದ ಕವನಗಳು ಈ ಸಂಕಲನದ ಇತರ ಕವನಗಳು.

ಕಂಬಾರರ ಐದನೆ ಸಂಕಲನ 'ಅಕ್ಕಕ್ಕೂ ಹಾಡುಗಳೇ (೧೯೯೪)ರಲ್ಲಿ ಪ್ರಕಟವಾಯಿತು. 'ಕಾಡುಕಾಡೆಂದರೆ', 'ಚಂದಿರನ ಬೇಟೆಗೆ ಹೋದಾ' ಜನಪದ ಕಥೆಗಳ ರಾಕ್ಷಸ' ಇತ್ಯಾದಿ ಕವನಗಳು ಗಮನ ಸೆಳೆಯುತ್ತವೆ. ಅವನ ಚಕೋರಿ ಮಹಾಕಾವ್ಯ ೧೯೯೭ರಲ್ಲಿ ಪ್ರಕಟವಾಯಿತು. ಕಂಬಾರರ ವಿನೂತನ ದೇಸೀ ಮಹಾಕಾವ್ಯ ಪ್ರಭೇದಕ್ಕೆ ಇದು ಮಹತ್ವದ ಕೊಡುಗೆ. ಚಕೋರಿ–ಚಿನ್ನಮುತ್ತ–ಚಂದ್ರಮುತ್ತನ ಅದ್ಭುತ ಕಥಾ ಸಂವಿಧಾನವುಳ್ಳ ಚಕೋರಿ ಕಂಬಾರರ ವಿಶಿಷ್ಟ ರಚನೆ. ಅಧೋಲೋಕದಲ್ಲಿರುವ ಮಾಯಾಕಾರ್ತಿ ಎಂಬವಳನ್ನು ಶಿವನ ಅಪ್ಪಣೆಯಂತೆ ನರಮಾನವನೊಬ್ಬ ವರಿಸಲು ಅಲ್ಲಿಗೆ ಹೋದ. ಅಧೋಲೋಕದಿಂದ ಅವನ ಎಡಕಾಲು ಹಿಡಿದು ಎಳೆಯಾರಂಭಿಸಿತು. ಬಲಗಾಲನ್ನು ಮಾಯಾಕಾರ್ತಿ ಹಿಡಿದೆಳೆದಳು. ಇದರಿಂದ ನರಮಾನವ ಸೀಳಿ ಎರಡು ಭಾಗನಾದ. ಶಿವದೇವರ ಅಪ್ಪಣೆಯಂತೆ ಸೂರ್ಯನ ಬೆಳಕಿನಿಂದ ಬಲಭಾಗವೂ, ಚಂದ್ರನ ಬೆಳಕಿನಿಂದ ಎಡಭಾಗವೂ ಪೂರ್ಣಗೊಂಡಿತು. ಹೀಗೆ ಒಬ್ಬನು ಇಬ್ಬರು ಅಣ್ಣತಮ್ಮಂದಿರಾದರು. ಅವರಿಬ್ಬರು ಶಿವಾಪುರವೆಂಬ ಹಟ್ಟಿ ಕಟ್ಟಿ ಬೆಳೆಸಿದರು. ದನಕುರಿಗಳನ್ನು ಕಾಯುವ ಕಾಯಕ ಪ್ರಾರಂಭಿಸಿದರು. ಗೊಲ್ಲರ ಕುಲಕ್ಕೆ ಮೊದಲಾದರು. ಸೂರ್ಯನ ಬೆಡಗಿನ ದಂಪತಿಗಳಿಗೆ ಚಿನ್ನಮುತ್ತನೆಂಬ ಮಗನೂ ಚಂದ್ರನ ಬೆಡಗಿನ ದಂಪತಿಗಳಿಗೆ ಚಂದ್ರಮುತ್ತನೆಂಬ ಮಗನೂ ಹುಟ್ಟಿದರು.

ಚಂದ್ರಮುತ್ತನೊಮ್ಮೆ ದನಕಾಯಲು ಹೋದಾಗ ಕಾಡಿನಲ್ಲಿ ಆಲದ ಮರದ ಕೆಳಗೆ ಬಿದ್ದಿದ್ದ ಹೆಣ್ಣು ಶಿಲಾಮೂರ್ತಿಯನ್ನು ನೋಡಿ ಮೋಹಿಸುತ್ತಾನೆ. ದನಕಾಯುವ ಹುಡುಗರು ಆ ಮೂರ್ತಿಯೊಡನೆ ಚಂದ್ರಮುತ್ತನ ಮದುವೆ ಮಾಡಿಸುತ್ತಾರೆ. ಆ ಹೆಣ್ಣು ಶಿಲಾಮೂರ್ತಿಯೇ ಯಕ್ಷಿ. ಅವಳಿಗೆ ಗುಡಿಕಟ್ಟಿ ಪ್ರತಿಷ್ಠಾಪಿಸುವರು. ಚಂದ್ರಮುತ್ತನ ಕೊಳಲ ದನಿಗೆ ಆ ಯಕ್ಷಿ ಶಿಲೆಯಿಂದ ಹೊರಬಂದು ನರ್ತಿಸುತ್ತಿರುತ್ತಾಳೆ. ಒಮ್ಮೆ ಮುದಿ ಜೋಗ್ತಿಯ ರೂಪದಿಂದ ಬಂದು ಅವನ ಕೊಳಲನ್ನು ಕಸಿದು ಕೊಂಡು ಹೋಗುತ್ತಾಳೆ. ಅವಳಿಂದ ಹಾಡು ಕಲಿಯುವ ಇಚ್ಛೆಯಿಂದ ಅವಳನ್ನು ಹುಡುಕಿಕೊಂಡು ಚಂದ್ರಮುತ್ತ ಹೋಗುತ್ತಾನೆ. ಮುದಿ ಜೋಗ್ತಿ ಚಕೋರಿ ಎಂಬ ಸುಂದರ ಹೆಣ್ಣಾಗಿ ಪರಿವರ್ತನೆ ಹೊಂದುತ್ತಾಳೆ. ಚಂದ್ರ ಮುತ್ತನಿಗೆ ಹಲವು ರಾಗಗಳನ್ನು ಕಲಿಸಿಕೊಡುತ್ತಾಳೆ. ಅವನೊಂದಿಗೆ ಪ್ರಣಯೋನ್ಮದ ಅನುಭವಿಸುತ್ತಾಳೆ. ತಾನು ತಿಂಗಳು ಬೆಳಕುಂಡು ಬದುಕುವ ಚಕೋರ ಪಕ್ಷಿ. ಹೊರಗಿನವರಿಗೆ ತಾನು ಯಕ್ಷಿಯೆಂದು ತನ್ನನ್ನು ಪರಿಚಯಿಸಿಕೊಳ್ಳುತ್ತಾಳೆ. ಇತ್ತ ಮಗನ ದಾರಿ ಕಾದ ಚಂದ್ರಮುತ್ತನ ತಾಯಿ ಇಷ್ಟಕ್ಕೆಲ್ಲಾ ಯಕ್ಷಿಯೇ ಕಾರಣಳೆಂದು ಭಾವಿಸಿ ಯಕ್ಷಿಯ ಮೂರ್ತಿಗೆ ಮೆಣಸಿನ ನೀರು, ಸೆಗಣಿ ಗಂಜಳ ಲೇಪಿಸುತ್ತಾಳೆ. ಇತ್ತ ಚಕೋರಿಗೆ ಮೈತುಂಬ ಉರಿ ಪ್ರಾರಂಭವಾಗುತ್ತದೆ. ತನ್ನ ಅರಮನೆಯಿಂದ ಚಂದ್ರಮುತ್ತನನ್ನು ಹೊರಗೆ ಕಳುಹಿಸಿ ಶಿವಾಪುರಕ್ಕೆ ಕಳುಹಿಸಿಕೊಡುತ್ತಾಳೆ. ಚಂದ್ರಮುತ್ತನ ತಾಯಿ ಅವನನ್ನು ಯಕ್ಷಿಣಿ ಗುಡ್ಡನನ್ನಾಗಿ ಬಿಟ್ಟು ಹರಕೆ ತೀರಿಸುತ್ತಾಳೆ,

ಶಿವಾಪುರಕ್ಕೆ ಬರಗಾಲದ ಬವಣೆ ಪ್ರಾರಂಭವಾದಾಗ ಚಂದ್ರಮುತ್ತ ಕೊಳಲೂದಿ ಮಳೆ ತರಿಸುತ್ತಾನೆ. ಚಕೋರಿ ರಹಸ್ಯವಾಗಿ ರಾತ್ರಿ ಬಂದು ಅವನೊಂದಿಗೆ ರಾಸ ಕ್ರೀಡೆಯಲ್ಲಿ ತೊಡಗುತ್ತಿರುತ್ತಾಳೆ. ಬೆಳಗಾದಾಗ ಅವರ ಮಿಲನದ ಗುರುತುಗಳು ಚಂದ್ರಮುತ್ತನ ಮೇಲಿರುತ್ತದೆ. ಯಕ್ಷಿಯ ಗುಡಿಯಲ್ಲಿ ಚಂದ್ರಮುತ್ತ ತಿಂಗಳ ರಾಗ ನುಡಿಸತೊಡಗಿದಾಗ ಚಕೋರಿಗೆ ದೈವತ್ವ ಪ್ರಾಪ್ತವಾಗಿ ಅವರು ಮೇಲೆ ಹಾರ ತೊಡಗುತ್ತಾಳೆ. ಅವಳು ಮೇಲೆ ಮೇಲೆ ಹಾರಿದಂತೆ ಚಂದ್ರಮುತ್ತ ಶಿಲೆಯಾಗತೊಡಗುತ್ತಾನೆ. ಚಕೋರಿ ಪುನಃ ಕೆಳಬಂದು ಶಿವನಲ್ಲಿ ಪ್ರಾರ್ಥಿಸಿ ಚಂದ್ರಮುತ್ತನನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಇದಾವುದೂ ಫಲಕೊಡದೆ ಅವನು ಸಂಪೂರ್ಣ ಶಿಲೆಯಾದ ಕೂಡಲೇ ಚಕೋರಿ ಪಕ್ಷಿಯಾಗಿ ಹಾರಿ ಹೋಗುತ್ತಾಳೆ. ಇವಿಷ್ಟು ಚಕೋರಿ ಮಹಾಕಾವ್ಯದ ಸಾರ. ಈ ಮಹಾಕಾವ್ಯದಲ್ಲಿ ಕಂಬಾರರು ಬಳಸಿದ ಭಾಷೆ ಅಪೂರ್ವವಾದುದು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇಂತಹ ಭಾಷೆ ಬಳಕೆಯಾಗಿಲ್ಲ.

'ಎಲ್ಲಿದೆ ಶಿವಾಪುರ' (೨೦೦೯) ಕಂಬಾರರ ಇತ್ತೀಚಿಗಿನ ಶಿವನ ಸಂಕಲನವಾಗಿದೆ. ಇದರಲ್ಲಿ ಒಟ್ಟು ನಾಲ್ಕು ಭಾಗಗಳಿವೆ. ಭಾಗ–೧ ಘೋಡಗೇರಿ, ಭಾಗ–೨ ಹಂಪಿ, ಭಾಗ–೩ ಅಮೇರಿಕ, ಭಾಗ–೪ ಆಕಾಶ–ಬಯಲು ಒಟ್ಟು ಕವನಗಳು ೫೪ ಘೋಡಗೇರಿ ಅಥವಾ ಶಿವಾಪುರ ಕಂಬಾರರ ಬಾಲ್ಯದ ಸುಂದರ ಕನಸುಗಳಿಗೆ ಆಶ್ರಯ ತಾಣವಾದ ಶಿವಾಪುರದ ಕಂಬಾರರೆಂದೇ ಮತ್ತೆ ಮತ್ತೆ ಗುರುತಿಸಲ್ಪಟ್ಟವರು ಅವರು. ಅವರ ಆದರ್ಶದ ಶಿವಾಪುರ ಈಗ ತನ್ನ ಅನನ್ಯತೆಯನ್ನು ಕಳೆದುಕೊಳ್ಳುತ್ತಿರುವ ವಿಷಾದ ಅವರನ್ನು ಆವರಿಸಿಕೊಂಡಿದೆ. ಶಿವಾಪುರದ 'ಘಟಪ್ರಭಾನದಿ' ಮೊದಲಿನ ಹಾಗಿಲ್ಲ. ಪಡ್ಡೆ ಹುಡುಗರೊಂದಿಗೆ ಈಜಲು ಹೋಗುತ್ತಿದ್ದ ಅವರಿಗೆ ಅದು ನೀಡಿದ್ದು ಅನಂತ ಅನುಭವ. ಅದೇ ಹೊಳೆಯಲ್ಲಿ ರಾಜಕುಮಾರಿಯ ಬಂಗಾರದ ಕೂಲು ಸಿಕ್ಕಿತಂತೆ. ಪಾತಾಳದ ನಾಗಿಣಿಯರ ತೋಳಕೊಳದಲ್ಲಿ ಬಂದಿಯಾಗಿ ಪಾತಾಳ ಕಂಡಿದ್ದನಂತೆ. ದೇವಲೋಕದ ಏಳು ಕನ್ಯೆಯರು ಜಲಕ್ರೀಡೆಯಾಡಲು ಬಂದಾಗ ಕಿರಿಯಳ ಬಟ್ಟೆ ನಮ್ಮೂರ ಗೌಡರ ಕಿರಿಯ ಮಗ ಕದ್ದು ಅವಳು ಅಲ್ಲೆ ಗುಡಿಸಲು ಕಟ್ಟಿ ಉಳಿಯುವಂತಾಗಿತ್ತು. ಇಂತಹ ಹಲವು ಐತಿಹ್ಯಗಳಿಗೆ ಸಾಕ್ಷಿಯಾದ ನದಿ ಈಗ ಏನಾಗಿದೆ ?

ಅವಳ ಭಾವ ದರ್ಪಣದಲ್ಲಿ
ನಮ್ಮ ಮುಖ ಮೂಡುವುದಿಲ್ಲ
ಮುದಿನೋರೆಯಲ್ಲೀಗ
ಬಿಳಿಯ ನಗೆ ಹೊಳೆಯುವುದಿಲ್ಲ
ಮೊದಲಿನ ಅಬ್ಬರವಿಲ್ಲ
ಧುಮಕುವ ರಭಸವಿಲ್ಲ
ಆಗೊಮ್ಮೆ ಈಗೊಮ್ಮೆ ರಭಸದಲಿ ಹರಿಯೊದಿದೆ
ಹಾಗೆ ಹರಿದದ್ದು ನೆರೆನೀರೋ ? ಕಣ್ಣೀರೊ ?
ಹೇಳಲಾರೆ (ಎಲ್ಲಿದೆ ಶಿವಾಪುರ)

ಕಂಬಾರರು ತನ್ನ ಜನ್ಮದಾತರನ್ನು ನೆನೆದು ಕೊಳ್ಳುವ ಎರಡು ಸುಂದರ ಕವನಗಳು ಈ ಸಂಕಲನದಲ್ಲಿವೆ. 'ನನ್ನವ್ವ'

ಕಾಡುಮರದಂಥ ನನ್ನವ್ವ
ಇರುವೆ ಮೊದಲು ಆನೆ ಕಡೆಯಾಗಿ
ಎಲ್ಲಾ ಜೀವರಾಶಿಯ ಕತೆಗಳಿಗೆ ಆಸರೆಯಾದವಳು

'ನನ್ನಪ್ಪ'

ನಾವೆಲ್ಲ ಮುಗಿದ ಮ್ಯಾಲೆ
ಮುದಿ ಹದ್ದಾಗಿ ಹಾರುತಿದ್ದ ನನ್ನಪ್ಪ
ಮ್ಯಾಲೆ ಮ್ಯಾಲೆ
ಕ್ಷಿತಿಜದಿಂದ ಕ್ಷಿತಿಜಕ್ಕೆ
ಅದರಾಚೆ ಹೋಗಿ ಸೀಮೆಯಂಚಿಗೆ,
ಮ್ಯಾಲಿನಾಕಾರವ
ಕೆಳಗಿನ ನೆಲವ ಭೇದಿಸುತ್ತಿದ್ದ
ನಸುಕಿನಲ್ಲಿ ನಾವೆದ್ದು ನೋಡಿದರೆ
ನಿನ್ನೆ ಮಲಗಿದ್ದಲ್ಲೆ ಇರುತ್ತಿದ್ದ !

ಕಂಬಾರರ ತಂದೆ-ತಾಯಿಗಳ ಬಹುಮುಖ ವ್ಯಕ್ತಿತ್ವವನ್ನು ಅತ್ಯಂತ ಆಪ್ತವಾಗಿ ಚಿತ್ರಿಸುತ್ತವೆ ಈ ಕವನಗಳು. 'ಕರಿಮಾಯಿ', 'ಬೇಡರ ಹುಡುಗನ ಬೇಟೆ', 'ಕೌಜಲಗಿ ನಿಂಗಮ್ಮ' ಇತ್ಯಾದಿ ಸಂಕಲನದ ಇತರ ಗಮನಾರ್ಹ ಕವಿತೆಗಳು.

ಕಂಬಾರರಿಗೆ ಕಾವ್ಯವೆನ್ನುವುದು ಒಂದು ಪ್ರೀತಿಯ ಮಾಧ್ಯಮ ಕಸುಬುಗಾರಿಕೆ. ಅವರೇ ಹೇಳುವಂತೆ "ಕವಿ ಮತ್ತು ಕವಿತೆಯಾಗಬೇಕು. ಕಾವ್ಯ ರಚನೆ ಅಂದ್ರೆ ಅದು ಏಕಾಂತದ ಸಂವಾದ, ಇದರ ಅರಿವು ಕವಿಗೆ ಇರಬೇಕು. ನನ್ನ ಆತ್ಮವನ್ನು ಹಿಂಡಿ ಹೊರಬಂದಿದೆ ಎನ್ನಿಸಬೇಕು ಕವಿತೆ. ಮೊಸರು ಕಡೆದರೆ ಬೆಣ್ಣೆ ಬರುತ್ತಲ್ಲ. ಹಾಗೆ, ಅದು ಹುಡುಗಿಯೊಂದಿಗಿನ ಪ್ರೀತಿಯಂತೆ ತೀರಾ ಖಾಸಗಿಯಾದುದು. ದೇವರ ಮುಂದೆಯೂ ಹೇಳಿಕೊಳ್ಳಲಾಗದ ಪ್ರೀತಿಯಂತಹದ್ದು. ಕವಿತೆ ಒಳಗಿನಿಂದ ಬರಬೇಕು. ನಾಭಿಯಿಂದ ಬರಬೇಕು. ಈಗ ಶಬ್ದಗಳಿಂದ ಬರ್ತಿದೆ. ಪೂರ್ಣ ವಿರಾಮ ಕೊಡಲಿಕ್ಕೂ ಇಂದಿನ ಯುವಕವಿಗಳಿಗೆ ವ್ಯವಧಾನವಿಲ್ಲ. ಹೃದಯವನ್ನು ನಲುಗಿಸುವಂತಹ, ಸ್ಪರ್ಶಿಸುವಂತಹ, ಕನಸು-ನನಸು-ಎಚ್ಚರಗಳ ಕುರಿತು ಸಮಗ್ರವಾಗಿ ಮಾತನಾಡುವಂತಹ ಕಾವ್ಯ ಬರಬೇಕು. ಪಂಚೇಂದ್ರಿಯಗಳಿಗೆ ಕಾವ್ಯದ ಸ್ಪಂದನ ಸಾಧ್ಯವಾಗಬೇಕು. ಕಾವ್ಯ ಅನ್ನೋದು ಒಂದು ಕಸುಬು. ಅದು ಆತ್ಮವನ್ನು ತೊಡಗಿಸುವ ಕಸುಬು". ಎನ್ನುವ ಕಂಬಾರರಿಗೆ ಕಾವ್ಯ ಅವರ ಜೀವನದ ಒಂದು ಭಾಗವೇ ಆಗಿತ್ತು. ಹೊಸ ಕಸುವು ಕೊಟ್ಟು ಕನ್ನಡ ಕಾವ್ಯ ಬರೆದ ಕಂಬಾರರು ಸಾಹಿತ್ಯ ಕ್ಷೇತ್ರದ ಅಪ್ರತಿಮ ಸಾಧಕ.

ಗ್ರಂಥ ಋಣ:


1. ಬಸವರಾಜ ಕಲ್ಗುಡಿ: ಕಂಬಾರರ ಸಾಹಿತ್ಯದ ನೆಲೆ ಬೆಲೆ, ಅಂಕಿತ ಪುಸ್ತಕ, ಬೆಂಗಳೂರು (೨೦೧೨)
2. ಶಿಖರಶೇಖರ ಕಂಬಾರ- ಡಾ.ಜಯಪ್ರಕಾಶ ಮಾವಿನ ಕುಳಿ, ಅಂಕಿತ ಪುಸ್ತಕ, ಬೆಂಗಳೂರು (೨೦೧೨)
3. ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು, ಅಂಕಿತ ಪುಸ್ತಕ, ಬೆಂಗಳೂರು (೨೦೧೨)
4. ಸಾಹಿತ್ಯ ಕಥನ: ಡಿ.ಆರ್. ನಾಗರಾಜ್., ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ (೧೯೯೬)